# ಕನ್ನಡದ ಹೂವುಗಳು!





ಚಿತ್ರ/ಬರಹ:
**ಗಣೇಶ್ ಕಾಳೀಸರ**

ಮತ್ತೆ ನವೆಂಬರ್ ಬಂದಿದೆ. ಕನ್ನಡ ರಾಜ್ಯೋತ್ಸವದ ಸಂಭ್ರಮ ಎಲ್ಲೆಡೆ ಮನೆ ಮಾಡಿದೆ. ಕನ್ನಡ ಕಹಳೆಯ ಸದ್ದು ಈ ತಿಂಗಳಿನಲ್ಲಿ ತುಸು ಜೋರಾಗಿಯೇ ಕೇಳಿ-ಬರುತ್ತದೆ. ಕೆಂಪು ಹಳದಿ ಕನ್ನಡದ ಬಾವುಟ ರಾರಾಜಿಸುತ್ತಿದೆ. ನಮ್ಮ ಕನ್ನಡ ಪ್ರೀತಿ ಜಾಗೃತವಾಗೋದು ನವೆಂಬರ್ ತಿಂಗಳು ಬಂದಾಗಲೇ ಎಂದರೂ ತಪ್ಪಾಗಲಾರದು. ಬಹುಶಃ ಪ್ರಕೃತಿಗೂ ಕನ್ನಡದ ಮೇಲೆ ಸದಾ ಪ್ರೀತಿ, ಅಭಿಮಾನ! ಹಾಗಾಗಿಯೇ ಅದು ಕನ್ನಡ ನಾಡಿಗೆ ಯಾವಾಗಲೂ ಪುಷ್ಪ ನಮನವನ್ನು ಸಲ್ಲಿಸುತ್ತಲೇ ಇರುತ್ತದೆ.

ಅದು ಹೇಗೆ ಅಂತೀರಾ..!?, ಕೆಂಪು ಹಳದಿ ಬಣ್ಣದ ಹೂವುಗಳನ್ನು ಎಲ್ಲಾ ಕಾಲದಲ್ಲೂ ಅರಳಿಸುತ್ತಾ ಅರಳಿಸುತ್ತಾ, ಪ್ರಕೃತಿ ಕನ್ನಡ ನೆಲಕ್ಕೆ ತನ್ನ ನಮನವನ್ನು ಸಲ್ಲಿಸುತ್ತದೆ. ಇದು ತುಸು ಅತಿಶಯೋಕ್ತಿ ಎನ್ನಿಸಬಹುದು.

ಆದರೆ ಕನ್ನಡಿಗನಿಗೆ ಹಾಗೂ ಕನ್ನಡದ ಮೇಲೆ ಪ್ರೀತಿ ಅಭಿಮಾನ ಇರುವ ಪ್ರತಿಯೊಬ್ಬರಿಗೂ ಈ ಕೆಂಪು ಹಳದಿ ಬಣ್ಣದ ಹೂವುಗಳನ್ನ ಕಂಡಾಗ ಕನ್ನಡದ ಬಾವುಟದ ನೆನಪಾಗಿ, ಕನ್ನಡದ ಮೇಲಿನ ಅಭಿಮಾನ ಜಾಗ್ರತವಾಗದೇ ಇರದು. ಈ ಕನ್ನಡದ ಹೂವುಗಳ ಹೆಸರಿನ ಹಂಗು ಇಲ್ಯಾಕೆ ಅಲ್ಲವೇ..!? ಕ್ಯಾಮೆರಾದಲ್ಲಿ ಬಂಧಿಯಾದ ಈ ಹೂವುಗಳನ್ನ ನೋಡಿ ಕನ್ನಡಾಂಬೆಗೆ ಮತ್ತೊಮ್ಮೆ ನಮಿಸೋಣ.